**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 2161/2022**

ಚಾ.ಸಾ–05, ಪ್ರಾ.ಸಾ–03

| | | |
|---|---|---|
| ಹೆಸರು | : | ಶೇಖರ್ |
| ತಂದೆಯ ಹೆಸರು | : | ಮಿಣಕಯ್ಯ |
| ವಯಸ್ಸು | : | 52 |
| ವೃತ್ತಿ | : | ಕೂಲಿ |
| ವಾಸ | : | ನೆರಗ್ಯಾತನಹಳ್ಳಿ |

**<u>ದಿನಾಂಕ 09.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಆರೋಪಿತರ ಪರಿಚಯವಿದೆ. ನಾನು ಈಗ ನೋಡುತ್ತಿರುವ ಸಹಿ ನನ್ನದೇ ಇದ್ದು ಅದನುನ 5 ವರುಷದ ಹಿಂದೆ ನಾನು ಆ ಸಹಿಯನ್ನು ಮಾಡಿದ್ದು, ಸದರಿ ಸಹಿಯನ್ನು ಎಕೆ ಮಾಡಿರುತ್ತೇನೆ ನನಗೆ ಗೊತ್ತಿಲ್ಲ. 5 ವರುಷದ ಹಿಂದೆ ಚಾಸಾ 1 ಮತ್ತು ಆರೋಪಿತರು ಜಗಳವಾಡಿದ್ದರು.

**<u>ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.</u>**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿಃ 24.04.2021 ರಂದು ರಾತ್ರಿ 8 ಗಂಟೆಗೆ ಆರೋಪಿತರೆಲ್ಲ ಚಾಸಾ 1 ಮತ್ತು 2 ರವರಿಗೆ ಜಗಳ ತೆಗೆದು ಹೊಡೆದರು ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ 1 ರವರ ತಲೆಗೂದಲನ್ನು ಹಿಡಿದು ಎಳೆದು 2 ನೇ ಆರೋಪಿ ಚಾಸಾ 2 ರವರ ಕೈ ಬೆರಳನ್ನು ತಿರುವಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 3 ರಿಂದ 6 ಚಾಸಾ 2 ರವರನ್ನು ತಡೆಹಿಡಿದು ನಿಲ್ಲಿಸಿ ಅವರಿಗೆ ಅವಾಚ್ಯ ಶಬ್ದದಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 4 ಸೇರಿ ಜಗಳ ಬಿಡಿಸುತ್ತಿರುತೇವೆ ಎಂದರೆ ಸರಿಯಲ್ಲ.

ಪೊಲಿಸರು ಸ್ಥಳ ಪಂಚನಾಮೆಗೆ ಬಂದಾಗ ನನ್ನ ಸಮಕ್ಷಮ ಪೊಲಿಸರು ಚಾಸಾ 1 ರವರು ತೋರಿಸಿದ ಸ್ಥಳವನ್ನು ಪಂಚನಾಮೆ ಮಾಡಿ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಸಹಿ ನನ್ನದೇ ಇದುದ ಅದನ್ನು ಪೊಲಿಸರ ಹೇಳಿಕೆ ಮೇರೆಗೆ ಮಾಡಿರುತ್ತೇನೆ. ಪಂಚನಾಮೆ ಮೇಲೆ ಇರುವ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ನಾನು ಗಲಾಟೆ ನೋಡಿದ ಕುರಿತು ಪೊಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ನಿಪಿ 3 ರಂತೆ ನಾನು ಪೊಲಿಸರ ಮುಂದೆ ಹೇಳಿಕೆ ನೀಡಿದ್ದರು ಸಹಿತ ಆರೋಪಿತರರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಸಿಸಿ ಸಂಖ್ಯೆ:2161/2022

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದ. ತಿ.ನರಸೀಪುರ**